(ಳ) ತೀರ್ಥಹಳ್ಳಿ ತಾಲ್ಲೂಕಿನ ಶಿಂಧುವಾಡಿ ಗ್ರಾಮದ ಸ. ನಂ. ೫೧–೫೪ರಲ್ಲಿರುವ ಸರ್ಕಾರಿ ಅರಣ್ಯ ಜಮೀನನ್ನು ಕಾನೂನು ಬಾಹಿರವಾಗಿ ವಿತರಣೆ ಮಾಡಿರುವುದು

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಶಿಂಧುವಾಡಿ ಗ್ರಾಮದ ಸರ್ವೆ ನಂ. ೫೧ ಮತ್ತು ೫೪ ರಲ್ಲಿನ ಸುಮಾರು ೨೦೫ ಎಕರೆ ಸರ್ಕಾರಿ ಅರಣ್ಯ ಸಂಪದ್ಭರಿತ ಜಮೀನನ್ನು ರೆವಿನ್ಯೂ ರೆಕರ್ಡ್‌ಗಳನ್ನು ಫೋರ್ಜರಿ ಮಾಡಿ ಎಸ್. ನಾಗರಾಜ ಮತ್ತು ಶ್ರೀಮತಿ ಸೀತಾ ಕ್ರಿಸ್ಟೋಫರ್ ಎಂಬುವರಿಂದ ಭಾರೀ ಮೊತ್ತದ ಲಂಚ ಪಡೆದು ವಿಶೇಷ ಜಿಲ್ಲಾಧಿಕಾರಿಗಳು ಅವರ ಕಚೇರಿಯಲ್ಲಿ ಹರಿಶ್ಚಂದ್ರ ಹಾಗೂ ತಿಮ್ಮಣ್ಣ ಎಂಬ ಅಧಿಕಾರಿಗಳ ಮೂಲಕ ದಾಖಲೆಗಳನ್ನು ರೂಪಿಸಿ ಅವರ ಹೆಸರುಗಳಲ್ಲಿ ಖಾತೆ ಮಾಡಿಕೊಂಡು ಕೊಡಲು ನಿರ್ಧರಿಸಿದ್ದರು. ಸದರಿ ಜಮೀನು ೧೯೮೦ನೇ ಇಸವಿಯಲ್ಲಿನ ಗೆಜೆಟ್ ನೋಟಿಫಿಕೇಷನ್ ಮೂಲಕ ಸರಕಾರಿ ಪೊಸಲು ಅರಣ್ಯ ಜಮೀನು ಎಂಬುದಾಗಿ ತೀರ್ಮಾನವಾಗಿದೆ ಅಲ್ಲದೆ ಬಹಳ ಹಿಂದಿನಿಂದಲೂ ಕೇತ್ವಾರಿ ಪತ್ರಿಕೆ ಹಾಗೂ ಇಂಡೆಕ್ಸ್ ದಾಖಲೆಗಳಲ್ಲಿಯೂ ಸರಕಾರಿ ಕಾಡು ಎಂದೇ ನಮೂದಾಗಿತ್ತು ಹೀಗಿದ್ದೂ ನಾಟಾ ಕಡಿಯಲು ಇಲಾಖೆಯವರು ಮೇಲ್ಕಂಡವರಿಗೆ ಪರವಾನಗಿ ನೀಡುವ ಪ್ರಯತ್ನ ನಡೆಸಿದ್ದಾರೆ. ಇದು ಕಾನೂನು ಬಾಹಿರವಾಗಿ ಮತ್ತು ಸರಕಾರಿ ಆಸ್ತಿಯು ಲೂಟಿಯಾಗಿದ್ದು ಈ ವಿಷಯವನ್ನು ಕಳೆದ ಎರಡು ವರ್ಷಗಳಿಂದಲೂ ಸದನದಲ್ಲಿ ತಂದಾಗ್ಯೂ ಈ ಬಗ್ಗೆ ಯಾವುದಿನಿಂದಲೂ ಯಾವ ಕ್ರಮವನ್ನೂ ಕೈಗೊಳ್ಳದಿರುವುದರಿಂದ ಸರ್ಕಾರೀ ಅರಣ್ಯ ಸಂಪದ್ಭರಿತ ಜಮೀನನ್ನು ಪರಭಾರೆಯಾಗದಂತೆ ಈಗಲಾದರೂ ಕ್ರಮ ಕೈಗೊಳ್ಳುವುದಲ್ಲದೆ ಇದರಲ್ಲಿ ಯಾರ್ಯಾರು ಶಾಮೀಲಾಗಿದ್ದಾರೆ ಎಂಬುದನ್ನು ಧೃಡ ಪಡಿಸಿಕೊಂಡು ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಮೂಲಕ ಲೂಟಿಯನ್ನು ನಿಲ್ಲಿಸಿ ಸಮಗ್ರ ತನಿಖೆ ನಡೆಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಗೈರು ಹಾಜರಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಗೈರು ಹಾಜರಿ.

(ಕ) ಕರ್ನಾಟಕ ವಿದ್ಯುತ್ ನಿಗಮದ ವರಾಹಿ ಯೋಜನೆಯಲ್ಲಿ ಕಾವಲುಗಾರರ ಹುದ್ದೆಗೆ ನೇಮಕಾತಿ ಮಾಡುವ ಬಗ್ಗೆ

ಶ್ರೀ ಪಟಪಂಕ್ಕಿ ರತ್ನಾಕರ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿದ್ಯುತ್ ನಿಗಮ ವರಾಹಿ ಯೋಜನೆಗೆ ಸಂಬಂಧಪಟ್ಟಂತೆ ಈಗಾಗಲೇ ಭದ್ರತಾ ಕಾವಲುಗಾರರ ಹುದ್ದೆಗೆ ಸಂದರ್ಶನ ನಡೆಸಿ ಸುಮಾರು ೩೩ ಮಂದಿಯನ್ನು ಕಾಯ್ದಿರಿಸಿದ ಪಟ್ಟಿಯಲ್ಲಿ ಆಯ್ಕೆ ಮಾಡಿದೆ. ಎರಡು ವರ್ಷಗಳು ಕಳೆದರೂ ಕೂಡ ಈ ಪಟ್ಟಿಯ ಯುವಕರಿಗೆ ಉದ್ಯೋಗ ನೀಡಿಲ್ಲ ಚಕ್ರಾ ವರಾಹಿ ಯೋಜನೆಯಲ್ಲಿ ಈಗಾಗಲೇ ಖಾಲಿ ಹುದ್ದೆಗಳು ಇದ್ದರೂ ಅವುಗಳನ್ನು ಭರ್ತಿ ಮಾಡುವಲ್ಲಿ ವಿಳಂಬ ಮಾಡುತ್ತಿದ್ದಾರೆ. ಈ ಕೆಲಸವನ್ನು ಈಗ ಇರುವ ಅಭ್ಯರ್ಥಿಗಳಿಂದಲೇ ಓವರ್ ಟೈಂ ಮತ್ತು ಸ್ಥಳಾಂತರದ ಕಾರ್ಯದಿಂದ (ಡೆಪ್ಯುಟೇಶನ್) ಅವರಿಂದಲೇ ಮಾಡಿಸುತ್ತಿದ್ದಾರೆ. ಈ ಕೆಲಸವನ್ನು ಕಾಯ್ದಿರಿಸಿದ ಪಟ್ಟಿಯಲ್ಲಿ ಇರುವವರಿಗೆ ಕೊಟ್ಟರೆ ಬಡ ರೈತ ಕುಟುಂಬಗಳಿಗೆ ಜೀವನೋಪಾಯಕ್ಕೆ ಸಹಾಯವಾಗುತ್ತದೆ. ಈ ಬಗ್ಗೆ ಸರಕಾರ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು) —ಮಾನ್ಯ ಅಧ್ಯಕ್ಷರೇ,

In the year 1986, to meet the requirements of Security Watchmen at the Varahi complex, a special recruitment was conducted. The main objective of this recruitment was to provide greater employment opportunities to those who had lost their lands as a result of submersion etc. due to this project coming up. Even